Bruhat Bengaluru Mahanagara Palike

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಕೆಂಗೇರಿ ಉಪ ವಿಭಾಗ, ವಾರ್ಡ್ ನಂ.198, ಹೆಮ್ಮಿಗೆಪುರ

ಸಂಖ್ಯೆ: ಸಕಾಅ/ಕೆಂಉವಿ/ಪಿ.ಆರ್/ಸಭೆ-03/2021-22 ದಿನಾಂಕ: 12.05.2021

### "ಸಭಾ ನಡವಳಿಗಳು"

ವಿಷಯ:- ವಾರ್ಡ್ ನಂ.198, ಹೆಮ್ಮಿಗೆಪುರ ವಾರ್ಡ್ ಸಭೆಯ ನಡವಳಿ

ಉಲ್ಲೇಖ:- 1. ಸಭಾ ಸೂಚನಾ ಪತ್ರ ಬಿಬಿಎಂಪಿ/ದಾವ/2020-22 ದಿನಾಂಕ: 11/05/2021
2. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ನಂ. RD 158 TNR
ದಿನಾಂಕ: 07/05/2021

*********

ಉಲ್ಲೇಖ(1)ರ ಸಭಾ ಸೂಚನಾ ಪತ್ರದ ಅನುಸಾರ ಉಲ್ಲೇಖ (2)ರ ಆದೇಶದ ಅಂಶವನ್ನು ಪರಿಶೀಲಿಸಲು ದಿನಾಂಕ: 12/05/2021 ರಂದು ಹೆಮ್ಮಿಗೆಪುರ, ವಾರ್ಡ್ ನಂ.198ರ ಕಾರ್ಯಾಲಯದಲ್ಲಿ ವಾರ್ಡ್ ಸಮಿತಿ ಸಭೆಯನ್ನು ಬೆಳಿಗ್ಗೆ 11.00 ಗಂಟೆಗೆ ಕರೆಯಲಾಗಿದ್ದು, ಸದರಿ ಸಭೆಯ ನಡವಳಿಗಳು.

ಹಾಜರಿದ್ದವರು:

| ಕ್ರ. ಸಂ | ಸಭೆಗೆ ಹಾಜರಾಗಿರುವ ಅಧಿಕಾರಿಗಳ | ಹುದ್ದೆ |
|---|---|---|
| 1 | ಶ್ರೀ ಉಸ್ಮಾನ್ ಪಾಷ | ರಾರಾ ನಗರ ವಲಯ ನೋಡಲ್ ಅಧಿಕಾರಿ, ರಾರಾ ನಗರ ವಲಯ, ಬಿಬಿಎಂಪಿ |
| 2 | ಶ್ರೀ ಶಿವಕುಮಾರ್ | ನೋಡಲ್ ಅಧಿಕಾರಿ, ವಾರ್ಡ್ ನಂ.198(ಹೆಮ್ಮಿಗೆಪುರ) ಹಾಗೂ ಕಾರ್ಯಪಾಲಕ ಅಭಿಯಂತರರು, ಉಪ ನಿರ್ದೇಶಕರ ಕಛೇರಿ ಕಟ್ಟಡ ಪರವಾನಗೆ ಕೋಶ-ಉತ್ತರ |
| 3 | ಶ್ರೀ ರವಿಚಂದ್ರಚಾರಿ | ಹಿರಿಯ ಆರೋಗ್ಯ ಪರಿವೀಕ್ಷಕರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ |
| 4 | ಡಾ॥ ಗಿರಿಜ ಬಿ | ಆರೋಗ್ಯ ವೈದ್ಯಾಧಿಕಾರಿ, ಕಂಗೇಉಇ ಆರೋಗ್ಯ ಪ್ರಾಥಮಿಕ ಕೇಂದ್ರ |

Scanned with CamScanner

| | | |
|---|---|---|
| 5 | ಕೃಷ್ಣಸ್ವಾಮಿ ಎಂ.ವಿ | ಶಿಕ್ಷಣ ಇಲಾಖೆ |
| 6 | ಹರೀಶ್ ಎನ್ | ಶಿಕ್ಷಣ ಇಲಾಖೆ |
| 7 | ರಜನಿಕಾಂತ್ ಸಿ.ಎಸ್ | ಶಿಕ್ಷಣ ಇಲಾಖೆ |
| 8 | ಪುಟ್ಟರಾಜ ಬಿ.ಎನ್ | ಶಿಕ್ಷಣ ಇಲಾಖೆ |
| 9 | ಬಸಪ್ಪ ಆಯಚ್ಚಿ | ಶಿಕ್ಷಣ ಇಲಾಖೆ |
| 10 | ಜೆರಿಮ್ ಪಿ | ಶಿಕ್ಷಣ ಇಲಾಖೆ |
| 11 | ಮೋನಿಕಾ ಎಸ್.ಡಿ. | ಕಿರಿಯ ಆರೋಗ್ಯ ಪರಿವೀಕ್ಷಕರು<br>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ |
| 12 | ಶ್ರೀ ಸಿ.ವಿ. ಸೂರ್ಯನಾರಾಯಣ | ಜಲ ಪರಿವೀಕ್ಷಕರು<br>ಬಿ.ಡಬ್ಲ್ಯೂ.ಎಸ್. ಎಸ್.ಬಿ. |
| 13 | ಶ್ರೀ ಕೃಷ್ಣಾನಾಯಕ್ | ಕೆಲಸ ಪರಿವೀಕ್ಷಕರು<br>ಬಿಬಿಎಂಪಿ ವಾರ್ಡ್ ನಂ.198 (ಹೆಮ್ಮಿಗೆಪುರ) |

ನೋಡಲ್ ಅಧಿಕಾರಿಯವರು ಸಭೆಯಲ್ಲಿ ಭಾಗವಹಿಸಿದವರನ್ನು ಸ್ವಾಗತಿಸುತ್ತಾ ದಿನಾಂಕ: 07/05/2021ರ ಸರ್ಕಾರಿ ಆದೇಶ ಸಂಖ್ಯೆ: RD 158 TNR 2020(1), ಅನ್ವಯ ವಾರ್ಡ್ ಮಟ್ಟದಲ್ಲಿ Ward Decentralized Triage and Emergency Response Committee ಯನ್ನು ಈ ಕೂಡಲೇ ರಚಿಸಲು ಹಾಗೂ ವಿವರಿಸಿರುವ ಈ ಕೆಳಕಂಡ ಕಾರ್ಯಗಳನ್ನು ಕೈಗೊಳ್ಳಬೇಕಾರಿರುವ ಬಗ್ಗೆ ತಿಳಿಸಿರುತ್ತಾರೆ.

- **<u>WDC ತಂಡವನ್ನು ಸದಸ್ಯರುಗಳು ಈ ಕೆಳಕಂಡಂತೆ ರಚಿಸಬಹುದಾಗಿರುತ್ತದೆ</u>**

ವಾರ್ಡ್ ವ್ಯಾಪ್ತಿಯಲ್ಲಿನ ಜನಪ್ರತಿನಿಧಿಗಳು, ಪಾಲಿಕೆಯ ವಾರ್ಡ್ ಅಧಿಕಾರಿಗಳು, ವಾರ್ಡ್‌ಗೆ ಸಂಬಂಧಿಸಿದ ಇತರೆ ಇಲಾಖೆಯ ಅಧಿಕಾರಿಗಳು, (ಪಿ.ಹೆಚ್.ಸಿ, ಬಿ.ಎಲ್.ಓ ಒಳಗೊಂಡಂತೆ), RWA/Civil Society Organisation, NGO (Health Sector) ಹಾಗೂ ಸರ್ಕಾರದೊಂದಿಗೆ ಕಾರ್ಯನಿರ್ವಹಿಸುತ್ತಿರುವ ಇತರೆ NGO ಗಳು, ಸ್ಥಳೀಯ ಸಂಘಗಳನ್ನು ಒಳಗೊಂಡಂತೆ ಸಧಸ್ಯ ಕಾರ್ಯದರ್ಶಿಗಳಾದ ಹಿರಿಯ ಆರೋಗ್ಯ ಪರಿವೀಕ್ಷಕರು WDC ತಂಡದ ಸದಸ್ಯರುಗಳನ್ನು ರಚಿಸುವ ಬಗ್ಗೆ ಆದೇಶವನ್ನು ಹೊರಡಿಸಲು ಅಗತ್ಯ ಕ್ರಮ ವಹಿಸುವುದು.

Scanned with CamScanner

❖ <u>ತಂಡವು ಈ ಕೆಳಕಂಡ ಕಾರ್ಯಗಳನ್ನು ನಿರ್ವಹಿಸಬೇಕಾಗಿರುತ್ತದೆ:-</u>

(i) ವಾರ್ಡ್‌ನಲ್ಲಿರುವ ಎಲ್ಲಾ ಸಾಮಾನ್ಯ ವೈದ್ಯರ ವಿವರಗಳನ್ನು ಕ್ರೋಢೀಕರಿಸುವುದು.

(ii) ವಾರ್ಡ್‌ನಲ್ಲಿ ಅಸ್ತಿತ್ವದಲ್ಲಿರುವ ಎಲ್ಲಾ ಆರ್.ಡಬ್ಲ್ಯೂ.ಎ, ಅಪಾರ್ಟ್‌ಮೆಂಟ್ಸ್ ಹಾಗೂ ಕೋಗೇರಿಗಳನ್ನು ಸಂಪರ್ಕಿಸಲು ಸಂಬಂಧಪಟ್ಟ ವ್ಯಕ್ತಿಗಳನ್ನು ಗುರುತಿಸಿ ಮ್ಯಾಪ್ ಮಾಡುವುದು.

(iii) ಸಾರ್ವಜನಿಕ ಆರೋಗ್ಯ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ NGOs ಗಳನ್ನು ಮ್ಯಾಪ್ ಮಾಡುವುದು, ಸದರಿ NGOs ರವರು ಒದಗಿಸಬಹುದಾದ ಸಂಪನ್ಮೂಲಗಳನ್ನು (Oxygen concentrators, home oxygen setup)ಗಳನ್ನು ಮ್ಯಾಪ್ ಮಾಡುವುದು.

(iv) ಆರ್.ಡಬ್ಲ್ಯೂ.ಎ, ಅಪಾರ್ಟ್‌ಮೆಂಟ್ಸ್ ಸಮುದಾಯಗಳು, ಕೋಗೇರಿಗಳು, ಎಸ್.ಸಿ/ಎಸ್.ಟಿ, ಮಂಗಳ ಮುಖಿಯರು ಮತ್ತು ಮಹಿಳೆಯರು ನೋಡಲ್ ಅಧಿಕಾರಿಗಳನ್ನು ಸಂಪರ್ಕಿಸಿ ಸ್ವಯಂಸೇವಕರಾಗಬಹುದು.

(v) ಕೋವಿಡ್-19 ಹಾರೈಕೆಗಾಗಿ ಬಳಸಹುದಾದ 30 ಹಾಸಿಗೆಗಳ ಆಸ್ಪತ್ರೆಗಳು ಸೇರಿದಂತೆ ಎಲ್ಲಾ ವೈದ್ಯಕೀಯ ಸೌಲಭ್ಯಗಳು, ಪಿ.ಹೆಚ್.ಸಿ.ಗಳು, ಸಿ.ಸಿ.ಸಿ.ಗಳು, ಅಸ್ಪತ್ರೆಗಳು ಮತ್ತು ಸರ್ನಿಂಗ್ ಹೋಂಗಳು, ಪರೀಕ್ಷಾ ಕೇಂದ್ರಗಳ ಮಾಹಿತಿಯನ್ನು ಅಪ್‌ಲೋಡ್ ಮಾಡುವುದು.

(vi) ಪಾಲಿಕೆಯ ಸಿಬ್ಬಂದಿ, ಅಂಗನವಾಡಿ ಸಿಬ್ಬಂದಿ, ಆಶಾ ಕಾರ್ಯಕರ್ತೆಯರ ಮತ್ತು ವಾರ್ಡ್‌ಗಳಿಗೆ ನಿಯೋಜಿಸಿರುವ ಬಿ.ಎಲ್.ಓ.ಗಳು ಸ್ವಯಂ ಸೇವಕರು ಹಾಗೂ ಸಾಮಾನ್ಯ ವೈದ್ಯರುಗಳಿಗೆ ನೀಡಬೇಕಾದ ತರಬೇತಿಯನ್ನು ಅನ್‌ಲೈನ್‌ನಲ್ಲಿ ಆಯೋಜಿಸಲು ಕ್ರಮ ವಹಿಸುವುದು.

❖ <u>ಹೆಮ್ಮಿಗೆಪುರ ವಾರ್ಡ್ ವ್ಯಾಪ್ತಿಯಲ್ಲಿ **Triage Centre** ಅನ್ನು ಸ್ಥಾಪಿಸುವುದು:</u>- ಕೋವಿಡ್-19 ಪರೀಕ್ಷೆಯನ್ನು ಕೈಗೊಂಡ ನಂತರ ನಾಗರೀಕರ ಆರೋಗ್ಯ ತಪಾಸಣೆಯನ್ನು ಕೈಗೊಳ್ಳಲು Triage Centre ಅನ್ನು ಹಾಗು ವಾರ್ ರೂಂಗೆ ಅವಶ್ಯವಿರುವ ಮಾನವ ಸಂಪನ್ಮೂಲ/ದೂರವಾಣಿ ಸಂಪರ್ಕ ಹಾಗೂ ಇತರೆ ಸೌಲಭ್ಯವನ್ನು ಸ್ಥಾಪಿಸಬೇಕಾಗಿದ್ದು, ಈ ಸಂಬಂಧ ವಾರ್ಡ್ ಅಭಿಯಂತರರು, ಆರೋಗ್ಯಾಧಿಕಾರಿ ಹಾಗೂ ಹಿರಿಯ ಆರೋಗ್ಯ ಪರಿವೀಕ್ಷಕರು ಅಧ್ಯಕ್ಷರೊಂದಿಗೆ ಸೂಕ್ತ ಕಟ್ಟಡವನ್ನು ಗುರುತಿಸಿ ಅವಶ್ಯವಿರುವ ಸೌಲಭ್ಯಗಳನ್ನು ಒದಗಿಸಲು ವಾರ್ಡ್ ಅಭಿಯಂತರರರು ನಿಯಮಾನುಸಾರ ಅಗತ್ಯ ಕ್ರಮ ವಹಿಸುವುದು.

❖ <u>ಹೆಮ್ಮಿಗೆಪುರ ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್ ಜಾಗೃತಿ ಕೇಂದ್ರವನ್ನು ರಚಿಸುವುದು:</u>- ಮನೆಯಲ್ಲಿ ಪ್ರತ್ಯೇಕವಾಗಿ ವಾಸಿಸಲು ಅಸಾಧ್ಯವಾದಲ್ಲಿ ಅಂತಹ ಕೋವಿಡ್-19 ಪಾಸಿಟಿವ್ ವ್ಯಕ್ತಿಗಳ ಆರೈಕೆಗಾಗಿ ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್ ಕೋವಿಡ್ ಕೇರ್ ಸೆಂಟರ್ ಅನ್ನು ರಚಿಸಲು ಸೂಕ್ತ ಜಾಗವನ್ನು ಗುರುತಿಸಿ ಅವಶ್ಯವಿರುವ ಸೌಲಭ್ಯಗಳನ್ನು ವಾರ್ಡ್ ಅಭಿಯಂತರರು ನಿಯಮಾನುಸಾರ ಅಗತ್ಯ ಕ್ರಮ ವಹಿಸುವುದು.

Scanned with CamScanner

❖ **IEC ಚಟುವಟಿಕೆಗಳನ್ನು ಕೈಗೊಳ್ಳುವ ಬಗ್ಗೆ:-**

a. ವಾರ್ಡ್‌ನಲ್ಲಿರುವ ಪ್ರತಿ ನಾಗರೀಕರಿಗೂ ಸಹ ಮಾಸ್ಕ್ ಮತ್ತು ಸಾಮಾಜಿಕ ಅಂತರ, ಸೋಂಕಿನ ಲಕ್ಷಣಗಳು, ಪಲ್ಸ್ (ನಾಡಿ ಮಿಡಿತ) ಆಕ್ಸಿಮೀಟರ್ ಮತ್ತು ರೋಗದ ಸ್ಥಿತಿಯ ಬಗ್ಗೆ ಅರಿವು ಮೂಡಿಸುವುದು.

b. ಪ್ರತ್ಯೇಕ ಐಸೋಲೇಷನ್, ಕೋವಿಡ್ ಪರೀಕ್ಷೆ ಹೇಗೆ ಮಾಡಿಸಬೇಕು ಮತ್ತು ನಾಡಿ ಮಿಡಿತ (ಪಲ್ಸ್) ಆಕ್ಸಿಮೀಡರ್ ಮತ್ತು ಪೀಡಿತ ಸ್ಥಾನಗಳ ಬಗೆಗಿನ ಪ್ರಾಮುಖ್ಯತೆಗಳನ್ನು ಸಾರ್ವಜನಿಕ ಪ್ರಕಟಣೆಗಳ ಮೂಲಕ ತಿಳಿಸುವುದು.

c. ಸಾಮಾನ್ಯ ನಾಗರೀಕರನ್ನು ಸಾರ್ವಜನಿಕರನ್ನು ತಲುಪಲು ಹೈಪರ್-ಲೋಕಲ್ ಸಾಮಾಜಿಕ ಮಾಧ್ಯಮವಾದ ವಾಟ್ಸ್‌ಪ್ ಗ್ರೂಪ್‌ಗಳನ್ನು ಬಳಸುವುದು. ಡಿಜಿಟಲ್ ಅಕ್ಷರತೆಯ ಅರಿವಿಲ್ಲದವರಿಗೂ ಸುದ್ದಿಯನ್ನು ತಲುಪಿಸುವ ಉದ್ದೇಶದಿಂದ ಸ್ವಯಂ ಸೇವಕರ ನೆಟ್‌ವರ್ಕ್‌ಗಳನ್ನು ಸ್ಥಾಪಿಸಬೇಕು.

d. ವಿವಿಧ ಭಾಷೆಗಳಲ್ಲಿ ಮುದ್ರಿತವಾದ ಐ.ಇ.ಸಿ. ಮಾರ್ಗಸೂಚಿಗಳನ್ನು ಎಲ್ಲಾ ದಿನಸಿ ಅಂಗಡಿಗಳಿಗೆ ವಿತರಿಸುವುದು. ಆರೋಗ್ಯ ವೈಧ್ಯಾಧಿಕಾರಿ ಮತ್ತು ಆರೋಗ್ಯಾಧಿಕಾರಿ ರವರು ಆಶಾ ಕಾರ್ಯಕರ್ತರು ಹಾಗೂ ಬಿ.ಎಲ್.ಐ IEC ಚಟುವಟಿಕೆಗಳಲ್ಲಿ ತೊಡಗಿಸುವುದು.

❖ **ವ್ಯಾಕ್ಸಿನೇಷನ್:-** ವಾರ್ಡ್ ವ್ಯಾಪ್ತಿಯಲ್ಲಿ ಲಸಿಕೆಯನ್ನು ಗರಿಷ್ಠ ಮಟ್ಟದಲ್ಲಿ ಯಶಸ್ವಿಗೊಳಿಸಲು ಮತ್ತು ಸಾರ್ವಜನಿಕರಿಗೆ ತಲುಪಿಸಲು ವಸತಿ ಪ್ರದೇಶಗಳಲ್ಲಿನ ನಾಗರೀಕರೊಂದಿಗೆ ಕಾರ್ಯನಿರ್ವಹಿಸುವುದು.

ಹಿರಿಯ ಆರೋಗ್ಯ ಪರಿವೀಕ್ಷಕರು/ಕಾರ್ಯದರ್ಶಿಗಳು, WDC ಸಭೆಯನ್ನು ಸರ್ಕಾರಿ ಆದೇಶದಲ್ಲಿ ಸೂಚಿಸಿರುವ ಅಜೆಂಡಾದಂತೆ ನಿಯತಕಾಲಿಕವಾಗಿ ಆಯೋಜಿಸುವುದು ಹಾಗೂ ಎಲ್ಲಾ ಸಂಬಂಧಪಟ್ಟ ಅಧಿಕಾರಿಗಳು ಹಾಗೂ WDC ಸದಸ್ಯರು ಕೋವಿಡ್-19 ಸೋಂಕನ್ನು ತಡೆಗಟ್ಟಲು ಮೇಲ್ಕಂಡಂತೆ ಕ್ರಮ ವಹಿಸಲು ಹಾಗೂ ಸಹಕರಿಸಲು ಕೋರುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಶಿವಕುಮಾರ್)
ನೋಡಲ್ ಅಧಿಕಾರಿ
ವಾರ್ಡ್ ಸಮಿತಿ
ವಾರ್ಡ್-198, ಹೆಮ್ಮಿಗೆಪುರ

<u>ಪ್ರತಿಯನ್ನು:-</u>

1) ಮಾನ್ಯ ಆಯುಕ್ತರು ರವರ ಅವಗಾಹನೆಗೆ ಸಲ್ಲಿಸಲು ಆಪ್ತ ಕಾರ್ಯಾಲಯಕ್ಕೆ ಸಲ್ಲಿಸಿದೆ.
2) ಮಾನ್ಯ ವಲಯ ಆಯುಕ್ತರ, ರಾಜರಾಜೇಶ್ವರಿನಗರ ವಲಯರವರ ಅವಗಾಹನೆಗೆ ಸಲ್ಲಿಸಿದೆ.
3) ಜಂಟಿ ಆಯುಕ್ತರು, ರಾಜರಾಜೇಶ್ವರಿನಗರ ವಲಯರವರ ಅವಗಾಹನೆಗೆ ಸಲ್ಲಿಸಿದೆ.
4) ಉಪ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ಸಲ್ಲಿಸಿದೆ.

Scanned with CamScanner

5) ಆರೋಗ್ಯ ವೈದ್ಯಾಧಿಕಾರಿಗಳು, ರಾಜರಾಜೇಶ್ವರಿನಗರ ವಲಯ
6) ವೈದ್ಯಾಧಿಕಾರಿಗಳು, ಪ್ರಾರ್ಥಮಿಕ ಆರೋಗ್ಯ ಕೇಂದ್ರ.
7) ಸ್ಥಳೀಯ ನಾಗರೀಕ ಕಲ್ಯಾಣ ಸಂಸ್ಥೆಗಳು.

Scanned with CamScanner